ತೆಗೆಯುವವನ ಹೆಸರಿನೊಂದಿಗೆ ಅವನ ಉಚ್ಚೆ ಎಂದು ಜೋಡಿಸಿ ಕುಶಾಲಿನ ಮಾತಾಡುವ ವಾಡಿಕೆ ಇತ್ತು. ಎಲ್ಲಾ ಅಡಿಕೆಕಾಯಿಗಳಂತೆ ಭಾವಿಸಿ ಮಾಮೂಲಿನ ಬಲ ಪ್ರಯೋಗಿಸಿ ಸಿಪ್ಪೆ ಸುಲಿದರೆ ಹೆಬ್ಬೆರಳಿನ ಬುಡಭಾಗದ ಅಂಗೈ ಕೆತ್ತಿ ಹೋಗಿ ನಾಲ್ಕು ದಿನ ಕಾಫಿಪುಡಿ ಮೆತ್ತುವ ಇಲಾಜು. ಮೆಟ್ಟುಗತ್ತಿಯ ಕುರಿತಾದ ನನ್ನ ಬರಹಕ್ಕೆ ಪ್ರೇರಕನಾದ, ನನಗೆ ಮೆಟ್ಟುಗತ್ತಿ ಒದಗಿಸಿ ದಿನವೂ ನಿನ್ನ ನೆನೆವಂತೆ ಮಾಡಿದ ಏ ಹುಡುಗಾ, ಮಗಳಿಗೆ ಮದುವೆ ಮಾಡುವ ವಯಸ್ಸು ನಿನಗಾಗಿದ್ದರೂ ನನಗಿಂತಾ ಚಿಕ್ಕವನಾದ ನೀನು ನನ್ನ ಕಣ್ಣಲ್ಲಿ ಹುಡುಗನೇ, ನೆನಪಿದೆಯೇನೋ ನಿನಗೆ? ಒಮ್ಮೆ ಅಡಿಕೆ ಸುಲಿಯುವಾಗ ಮೇಲೆ ಹೇಳಿದ ಸೀನೀರು ತುಂಬಿದ ಅಡಿಕೆಕಾಯಿ ಸುಲಿದು, ನೀರಿನ ಪಸೆಗೆ ಜಾರಿದ ಕೈ ಕತ್ತಿಯ ಹರಿತ ಅಲುಗಿಗೆ ತಾಗಿ ಕುಯ್ದು ಹೋಗಿ, ಎಲ್ಲರಂತೆ ನೀನು ಕಾಫಿಹುಡಿಯೋ, ಅರಿಸಿನಪುಡಿಯೋ ಮೆತ್ತಿಕೊಳ್ಳಲಿಲ್ಲ. ಗಾಯಕ್ಕೆ ಮತ್ತೊಂದು ಕೈನ ಹೆಬ್ಬೆರಳು ಒತ್ತಿ ಹಿಡಿದು ಅಡಿಗೆಮನೆಗೆ ಹೋಗಿ ಉಪ್ಪಿನಕಾಯಿ ರಸ ಹಚ್ಚಿಕೊಂಡಿದ್ದೆ. ಉರಿಗೆ ಕಣ್ಣಲ್ಲಿ ನೀರಾಡಿದರೂ ಏನೂ ಆಗದಂತೆ ದೊಡ್ಡ ಹೀರೋನ ಹಾಗೆ ಫೋಸ್ ಕೊಟ್ಟಿದ್ದೆ. ಬಲಗೈಗೆ ಗಾಯ ಮಾಡಿಕೊಂಡ ಮಕ್ಕಳು ಉಪ್ಪು, ಖಾರ ಬೆರೆತ ಮೇಲೋಗರವನ್ನು ಬಿಸಿ ಅನ್ನಕ್ಕೆ ಕಲೆಸಿಕೊಳ್ಳುವಾಗ ಉರಿಗೆ ಲಬೋ ಲಬೋ ಹುಯ್ದುಕೊಳ್ಳುವಂತಾದರೂ ಕನಿಕರಿಸುವ ಕಾಲ ಅದಾಗಿರಲಿಲ್ಲ. 'ಉಪ್ಪು, ಖಾರ, ಹುಳಿ ತಾಗಿದ್ರೆ ಗಾಯ ಬೇಗ ವಾಸಿಯಾಗುತ್ತೆ' ಅನ್ನುವ ಅನುಭವದ ಧೋರಣೆ ಮಾತು. ಆದರೂ ಗಾಯಕ್ಕೆ ಉಪ್ಪಿನಕಾಯಿ ರಸ ಹಚ್ಚಿಕೊಳ್ಳುವುದೆಂದರೆ ಸ್ವಲ್ಪ ಅತಿರೇಕ ಎಂದು ಎಲ್ಲರಿಗೂ ಅನಿಸಿಯೇ ಅನಿಸಿತ್ತು. ನೀನು ಎಲ್ಲರಂತಲ್ಲ ಎಂದು ಆಮೇಲೂ ಸಾಬೀತು ಮಾಡಿಬಿಟ್ಟೆ. ನಿನಗೆ ಸರಿ ಕಂಡ ದಾರಿಯಲ್ಲಿ ಹೆಜ್ಜೆ ಇಟ್ಟೆ. ಆತ್ಮಸಾಕ್ಷಿಯಂತಾ ದೊಡ್ಡ ಮಾತಿಗೆ ಉದಾಹರಣೆಯಾದೆ. ಸಂಪರ್ಕ ಅನ್ನುವುದು ಸಲೀಸಾಗಿರುವ ಕಾಲವಾದರೂ ಎಷ್ಟು ಬೇಕೋ ಅಷ್ಟು ಅಂತರ ಕಾಪಾಡಿಕೊಂಡಿರುವ ಏ ಹುಡುಗಾ, ಹದಿಹರೆಯದ ವಯಸ್ಸಲ್ಲಿ ನೀನು ತಂದುಕೊಟ್ಟ ಮೆಟ್ಟುಗತ್ತಿಯಿಂದ ನಿನ್ನ ನೆನಪನ್ನು ನನ್ನ ಅಂತರಂಗದಲ್ಲಿ ಶಾಶ್ವತವಾಗಿಸಿಕೊಂಡಿದ್ದಿ ಅಂದರೆ ನಂಬುತ್ತೀಯಾ?

**ವಸುಮತಿ ಉಡುಪ**

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕಿನ ಕಿರಣಕೆರೆ ಸ್ವಗ್ರಾಮ. ಪ್ರಸ್ತುತ ಮೈಸೂರಿನಲ್ಲಿ ವಾಸ. ಕತೆ, ಕಾದಂಬರಿ, ನಾಟಕ, ಶಿಶುಸಾಹಿತ್ಯ, ಪ್ರಬಂಧ ಸೇರಿದಂತೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬರವಣಿಗೆ ಮಾಡಿದ್ದಾರೆ. ಸಮಗ್ರ ಕಥಾ ಸಂಕಲನ ಮೂರು ಭಾಗಗಳಲ್ಲಿ ಪ್ರಕಟವಾಗಿದೆ. ಮಲೆನಾಡಿನ ಪರಿಸರ, ಭಾಷೆ, ಜೀವನಶೈಲಿ ಅವರ ಬಹುತೇಕ ಕತೆಗಳ ವಸ್ತು.